# ಭಾರತೀಯ ಜನತಾ ಪಾರ್ಟಿ

## ಕೇಂದ್ರ ಕಚೇರಿ


## 11, ಅಶೋಕ ರಸ್ತೆ, ನವದೆಹಲಿ–110001

**Phone-011-23005700, Fax-011-23005787**


**ಭಾಜಪ ರಾಷ್ಟ್ರೀಯ ಉಪಾಧ್ಯಕ್ಷ ಶ್ರೀ ಮುಕ್ತಾರ್ ಅಬ್ಬಾಸ್ ನಕ್ವಿ ಅವರು ನೀಡಿದ ಪತ್ರಿಕಾ ಹೇಳಿಕೆ**

ನವದೆಹಲಿ, 27 ಫೆಬ್ರವರಿ: ಭಾಜಪ ತನ್ನ ರಾಷ್ಟ್ರೀಯ ಪರಿಷತ್ತು ಮತ್ತು ರಾಷ್ಟ್ರೀಯ ಕಾರ್ಯಕಾರಣಿ ಸಭೆಯನ್ನು ಮಾರ್ಚ್ 1ರಂದು ನವದೆಹಲಿಯಲ್ಲಿ ನಡೆಸಲಿದೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿಯು ಮಾರ್ಚ 1ರಂದು ನಡೆಯಲಿದ್ದು, ಎರಡು ದಿವಸಗಳ ರಾಷ್ಟ್ರೀಯ ಪರಿಷತ್ತು ಮಾರ್ಚ್ 2ರಂದು ಆರಂಭವಾಗಲಿದೆ  ಎಂದು ಭಾಜಪ ಉಪಾಧ್ಯಕ್ಷರಾದ ಶ್ರೀ ಮುಕ್ತಾರ್ ಅಬ್ಬಾಸ್ ನಕ್ವಿಯವರು ಹೇಳಿದ್ದಾರೆ.

ಪಕ್ಷದ ಅಧ್ಯಕ್ಷರಾದ ಶ್ರೀ ರಾಜನಾಥ್ ಸಿಂಗ್ ಅವರ ಭಾಷಣದಿಂದ ಸಭೆ ಆರಂಭವಾಗಲಿದ್ದು, ದೇಶದಲ್ಲಿ ಪ್ರಚಲಿತವಾದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳನ್ನು ಚರ್ಚಿಸಲಿದ್ದಾರೆ ಎಂದು ಶ್ರೀ ನಕ್ವಿ ತಿಳಿಸಿದ್ದಾರೆ.

ರಾಷ್ಟ್ರೀಯ ಕಾರ್ಯಕಾರಣಿ ನಾಲ್ಕು ವಿಭಾಗಗಳಲ್ಲಿ ನಡೆಯಲಿದ್ದು, ರಾಷ್ಟ್ರೀಯ ಪರಿಷತ್ತಿನ ಸಭೆ ಒಂಬತ್ತು ಅಧಿವೇಶನಗಳನ್ನು ಹೊಂದಿದೆ ಎಂದು ಶ್ರೀ ನಕ್ವಿ ಹೇಳಿದರು. ಈ ಮೂರು ದಿವಸಗಳ ಸಭೆಯಲ್ಲಿ "ಸುಶಾಸನ್ ಸಂಕಲ್ಪ ಬಿಜೆಪಿ ವಿಕಲ್ಪ್" ಅಥವಾ ಒಳ್ಳೆಯ ಆಡಳಿತ ನೀಡುವುದೇ ಭಾಜಪ ಸಂಕಲ್ಪ ಎಂಬ ಧ್ಯೇಯ ವಾಕ್ಯದೊಂದಿಗೆ ಮುಂಬರುವ ಚುನಾವಣೆಗೆ ಅಗತ್ಯ ಸೂತ್ರಗಳನ್ನು ಚರ್ಚಿಸಲಾಗುವುದು.

ಪರಿಷತ್ತು ಮತ್ತು ಕಾರ್ಯಕಾರಣಿ ಸಭೆಯಲ್ಲಿ ದೇಶ ಅನುಭವಿಸುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ ವಿದ್ಯಮಾನಗಳು ಮತ್ತು ಸವಾಲುಗಳ ಕುರಿತು ಚರ್ಚೆ ನಡೆಸಲಾಗುವುದು ಎಂದು ಶ್ರೀ ನಕ್ವಿ ತಿಳಿಸಿದ್ದಾರೆ. ಭ್ರಷ್ಟಾಚಾರ, ಹಗರಣಗಳು, ಹಣದುಬ್ಬರ, ಆಂತರಿಕ ಭದ್ರತೆ, ರಾಷ್ಟ್ರೀಯ ಸುರಕ್ಷತೆ ಕುರಿತು ಸಮಾಲೋಚನೆ ನಡೆಸಲಾಗುವುದು ಮತ್ತು "ಅಂತ್ಯೋದಯ ಹಾಗೂ ಒಳ್ಳೆಯ ಆಡಳಿತ"ದ ಬಗ್ಗೆಯೂ ವಿಚಾರವಿನಿಮಯ ನಡೆಯಲಿದೆ.

ಮುಂಬರುವ ಸಾರ್ವತ್ರಿಕ ಚುನಾವಣೆಗೆ ಅಗತ್ಯ ಸೂತ್ರಗಳು ಮತ್ತು ಸಿದ್ಧತೆಗಳ ಮಾರ್ಗಸೂಚಿಯನ್ನು ಸಹ ಸಭೆ ಸಿದ್ಧಪಡಿಸಲಿದೆ. ಮುಂಬರುವ ಚುನಾವಣೆಗೆ ಸಿದ್ಧತೆ ಮತ್ತು ಸೂತ್ರ ತಯಾರಿಸುವ ಸಂದರ್ಭದಲ್ಲಿ

“ಸುಶಾಸನ್ ಸಂಕಲ್ಪ್ ಬಿಜೆಪಿ ವಿಕಲ್ಪ್” ಎಂಬ ಗುರಿಯೊಂದಿಗೆ ಯುದ್ಧೋಪಾದಿಯಲ್ಲಿ ಜನರ ಬಳಿಗೆ ತೆರಳಿ ಕಾರ್ಯನಿರ್ವಹಿಸುವಂತೆ ನಮ್ಮ ಕಾರ್ಯಕರ್ತರಿಗೆ ತಿಳಿಸಲಾಗುವುದು.

ರಾಷ್ಟ್ರೀಯ ಪರಿಷತ್ ಮತ್ತು ಕಾರ್ಯಕಾರಣಿಯ ಎಲ್ಲಾ ಸದಸ್ಯರು, ಲೋಕಸಭೆ ಮತ್ತು ರಾಜ್ಯ ಸಭೆಯ ಪಕ್ಷದ ಸಂಸದರು, ವಿಧಾನಸಭೆಯ ಸದಸ್ಯರು, ರಾಜ್ಯ ಪದಾದಿಕಾರಿಗಳು, ರಾಷ್ಟ್ರೀಯ ಮೋರ್ಚಾದ ಸಮನ್ವಯ ನಿರ್ವಾಹಕರು, ಎಲ್ಲಾ ಜಿಲ್ಲೆಯ ಪಕ್ಷದ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಭಾಜಪ ಮೇಯರ್‌ಗಳು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಸಂಘಟನಾ ಕಾರ್ಯದರ್ಶಿಗಳು ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ಭಾಗವಹಿಸಲಿದ್ದಾರೆ. ರಾಷ್ಟ್ರೀಯ ಕಾರ್ಯಕಾರಣಿ ಸಭೆಯು ನವದೆಹಲಿಯ ಎನ್‌ಡಿಎಂಸಿ ಸಭಾಭವನದಲ್ಲಿ ಹಾಗೂ ರಾಷ್ಟ್ರೀಯ ಪರಿಷತ್ ಸಭೆ ತಾಲ್‌ಕಟೋರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಶ್ರೀ ನಕ್ವಿ ತಿಳಿಸಿದ್ದಾರೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ